PAPERS LAID ON THE TABLE

Sri B. VAIKUNTA BALIGA (Minister for Labour and Legal Affairs).—Sir, I lay on the Table :

(1) Finance Accounts 1956-57 (from 1st April 1956 to 31st October 1956) and the Audit Report of the former State of Coorg ;

(2) Appropriation Accounts 1956-57 (from 1st April 1956 to 31st October 1956) and the Audit Report of the former State of Coorg ;

(3) Finance Accounts 1956-57 (from 1st April 1956 to 31st October 1956) and the Audit Report of the former State of Mysore ;

(4) Finance Accounts 1954-55 and the Audit Report 1956 of the former State of Hyderabad ;

(5) Finance Accounts 1955-56 and Audit Report 1956 of the former State of Hyderabad ;

in pursuance of clause (2) of Article 151 of the Constitution of India read with clause 2 of the States Reorganisation (Removal of Difficulties Order No. 2).

REPORT OF THE MYSORE TENANCY AND AGRICULTURAL LAND LAWS COMMITTEE.

(Discussion continued)

Mr. SPEAKER.—Further debate on the report of the Mysore Tenancy and Agricultural Land Laws Committee.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಸಭಾಪತಿಗಳೇ, ಜತ್ತಿ ಸಮಿತಿಯವರು ಒಪ್ಪಿಸಿರತಕ್ಕಂಥ ಮೈಸೂರು ಜಮೀನ್‌ದಾರಿ ವರದಿಯ ಮೇಲೆ ಈಗಾಗಲೇ ವಿಪುಲವಾದ ಚರ್ಚೆ ಆಗಿದೆ. ಈ ಚರ್ಚೆ ನಡೆಯುವಾಗ ನಾನು ಈ ವರದಿಯಮೇಲೆ ಬಂದಂಥ ಕೆಲವು ಸೂಚನೆಗಳನ್ನು ಮತ್ತು ಸಲಹೆ ಗಳನ್ನು ಕೇಳಿದ್ದೇನೆ. ಅದರಲ್ಲಿ ಬಹಳಮಟ್ಟಿಗೆ ಹೆಚ್ಚಿಗೆ, ಈ ಭೂಸುಧಾರಣೆ ಸಮಿತಿಯನ್ನು ಸರ್ಕಾರ ನೇಮಿಸು ವಾಗ ಮೈಸೂರಿನಲ್ಲಿ ವಿಲೀನವಾದ ನಾನಾ ಪ್ರದೇಶ ಗಳಲ್ಲಿ ಬಂದಿರತಕ್ಕಂಥ ಗೇಣಿ ಶಾಸನವನ್ನು ಸಮ ನ್ವಯ ಮಾಡಬೇಕು ಎಂದು ಕೊಟ್ಟಿರುವ ಒಂದು ಆದೇಶವನ್ನು ಎಲ್ಲರೂ ಒಪ್ಪುತ್ತಾರೆ. ಈ ರೀತಿಯಾಗಿ ಒಂದು ವರದಿಯನ್ನು ಕೊಡುವುದಕ್ಕೋಸ್ಕರ ಸರ್ಕಾರ ಈ ಸಮಿತಿಯನ್ನು ನೇಮಕಮಾಡಿದ್ದರೆಂಬುದು ತಮಗೆ ತಿಳಿದ ವಿಷಯವಾಗಿದೆ.

ಈ ಗೇಣಿ ಶಾಸನ ಮತ್ತು ಭೂ ಶಾಸನಕ್ಕೆ ಸಂಬಂಧಪಟ್ಟಂಥ ವಿಚಾರ ಮೈಸೂರಿಗಾಗಲಿ ಅಥವಾ ಐದು ಭಾಗಗಳಿಂದ ಬಂದಂಥ ಪ್ರದೇಶಗಳಿಗಾಗಲಿ ಹೊಸದಾಗಿ ಹೊರಿಸಿಥ ಕಾನೂನು ಅಲ್ಲವೆನ್ನುತಕ್ಕಂಥಾ ದ್ದನ್ನು ನಾನು ಸ್ಪಷ್ಟಪಡಿಸಲು ಇಷ್ಟಪಡುತ್ತೇನೆ. ಹೀಗೆ ಹೇಳುವಾಗ ಈ ಐದು ಭಾಗಗಳಲ್ಲಿ ವ್ಯೆಯಕ್ತಿಕ ರೀತಿಯಾದ ಕಾನೂನುಗಳು ಜಾರಿಯಲ್ಲಿದ್ದವು. ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿದ್ದ ರಿಂದ, ಗೇಣಿದಾರರಿಗಾಗಲೀ, ಭೂಮಾಲೀಕರಿ ಗಾಗಲೀ, ಏನೊಂದೂ ತೊಂದರೆಯಾಗದಾರ ದೆಂಬ ರೀತಿಯಲ್ಲಿ ಏಕರೀತಿಯಾದ ಒಂದು ಕಾನೂನು ಮಾಡುವಾಗ, ಅದನ್ನು ತರಾತುರಿಯಿಂದ ಮಾಡ ದಾರದೆಂದೂ, ಈ ವರದಿ ಪ್ರಚಾರವಾಗಬೇಕು ಮತ್ತು ಜನಾಭಿಪ್ರಾಯವನ್ನು ಕೂಡಿನಬೇಕು ಎಂಬ ದೃಷ್ಟಿ ಯಿಂದ ಮೈಸೂರು ಸರ್ಕಾರದವರು ಮನಸ್ಸುಮಾಡಿ ಈ ಸಮಿತಿಯನ್ನು ನೇಮಿಸಿದರು. ಅದರಂತೆಯೇ ಜತ್ತಿ ಸಮಿತಿಯವರು ತಮಗೆ ಇದ್ದಂಥ ಅವಕಾಶದಲ್ಲಿ ಬಹಳಮಟ್ಟಿಗೆ ಈ ಮಾನ್ಯ ಸಭೆಯ ಬಹುಮಂದಿಗೆ ಒಪ್ಪುವ ರೀತಿಯಲ್ಲಿ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಅದಕ್ಕಾಗಿ ನಾನು ಸಂತೋಷವನ್ನು ವ್ಯಕ್ತಪಡಿಸುತ್ತಾ, ನನಗೆ ತಿಳಿದ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆ ಯಲ್ಲಿ ನಿವೇದಿಸಿಕೊಳ್ಳಲು ಇಚ್ಛಿಸುತ್ತೇನೆ.

ಈ ಜತ್ತಿ ಸಮಿತಿಯವರು ವರದಿಯನ್ನು ತಯಾರಿಸು ವಾಗ ಗೇಣಿ ಶಾಸನಕ್ಕೆ ಸಂಬಂಧಪಟ್ಟಂತೆ, ಗೇಣಿಯ ಒಂದು ಸ್ಥಿರತೆ, ಗೇಣಿ ಮೊಬಲಗು, ಭೂಮಾಲೀಕರು ತಾವು ಸ್ವಂತ ಸಾಗುವಳಿ ನಲುವಾಗಿ ಗೇಣಿದಾರ ರಿಂದ ಎಷ್ಟು ಜಮೀನು ವಾಪಸು ತೆಗೆದುಕೊಳ್ಳ ಬಹುದು, ಗೇಣಿದಾರರಿಗೆ ಭೂಮಾಲೀಕರಿಂದ ಜಮೀ ನನ್ನು ಕೊಂಡುಕೊಳ್ಳುವ ಹಕ್ಕನ್ನು ಎಷ್ಟರಮಟ್ಟಿಗೆ ಕೊಡಬೇಕು, ಹಾಗೆ ಕೊಡಬೇಕಾದ ಪಕ್ಷದಲ್ಲಿ, ಈ ಪರಿಹಾರದ ಹಣವನ್ನು ಯಾವ ರೀತಿಯಿಂದ ಪಾವತಿ ಮಾಡಬೇಕು, ಅದಕ್ಕೆ ಎಷ್ಟು ಮೊಬಲಗನ್ನು ನಿರ್ಧರಿಸ ಬೇಕು, ಇದರಲ್ಲಿ ಯಾರ್ಯಾರಿಗೆ ಏನೇನು ರಿಯಾಯಿತಿ ಗಳನ್ನು ಕೊಡಬೇಕು ಎಂಬ ಈ ಅಂಶಗಳನ್ನು ವಿಮರ್ಶೆ ಮಾಡುವಂತೆ ಸರ್ಕಾರದವರು ನೂಚನೆ ಕೊಟ್ಟಿದ್ದರು. ಈ ಒಂದು ಚೌಕಟ್ಟಿನಲ್ಲಿ ಜತ್ತಿ ಸಮಿತಿಯವರು ವರದಿಯನ್ನು ತಯಾರಿಸಿ ನಮ್ಮ ಮೆಚ್ಚುಗೆಯನ್ನು ಪಡೆ ದಿದ್ದಾರೆ.

ಬಹಳ ಮಟ್ಟಿಗೆ ಮಾತನಾಡಿದ ಮಾನ್ಯ ಸದಸ್ಯ ರೆಲ್ಲರೂ ಕೂಡ ಈ ವಿಷಯದಲ್ಲಿ ಒಂದು ರೀತಿಯಾದ ಗೇಣಿ ಶಾಸನವನ್ನು ತರತಕ್ಕದ್ದೆಂದು ಒಪ್ಪಿದರೂ ಕೂಡ, ಹೆಚ್ಚಾಗಿ ವಿವಾದಕ್ಕೆ ಅವ ಕಾಶ ಕೊಟ್ಟಂಥ ಒಂದು ವಿಷಯವೆಂದರೆ ಕುಟುಂಬಕ್ಕೆ ನಿರ್ದಿಷ್ಟವಾಗಿ ಎಷ್ಟು ಜಮೀನನ್ನು ನಿಗದಿ ಮಾಡಬೇಕು, ಎನ್ನುವ ವಿಷಯ. ಆ ವಿಷಯದಲ್ಲಿ ಅನೇಕ ರೀತಿಯ ಸೂಚನೆಗಳು ಬಂದುವು. ಈ ಕುಟುಂಬ ಹಿಡುವಳಿ ಮಿತಿ ವಿಷಯದಲ್ಲಿ ವಿರೋಧವಾಗಿ ಮಾತನಾಡಿದ ಮಹನೀಯರೆಲ್ಲರೂ ಕೂಡ ಈ ವರದಿಯನ್ನು ಅಂಕಿ ಅಂಶಗಳ ಮುಖಾಂತರ ಜರಿದಿದ್ದರೆ ಎಷ್ಟು ಜಮೀನು ಕುಟುಂಬ ಹಿಡ ವಳಿಯಾಗು ತ್ತೆಂದು ಗೊತ್ತಾಗುತ್ತಿತ್ತು. ಸ್ವಲ್ಪ ಮಟ್ಟಿಗೆ ಲೆಕ್ಕ ಹಾಕಿದರೆ 3,600 ರೂಪಾಯಿ ಗ್ರಾಸ್ ಇನ್ ಕಮ್ ಅಂದರೆ ಒಟ್ಟು ಉತ್ಪನ್ನ ಎಂದು ಹೇಳಿದರೆ ಒಂದು (ಫ್ಯಾಮಿಲಿ ಹೋಲ್ಡಿಂಗ್) ಕುಟುಂಬದ ಹಿಡು ವಳಿಯು ಆಗಿರಬೇಕು ಮತ್ತು ಇದರ ಮೂರರಷ್ಟು ಒಂದು ಕುಟುಂಬ ಹಿಡುವಳಿ ಮಿತಿ (ಫ್ಯಾಮಿಲಿ ಸೀಲಿಂಗ್) ಆಗಿರಬೇಕು, 3,600 ರೂಪಾಯಿನ ನಾಲ್ಕುವರೆಯಷ್ಟು ಒಂದು ಸಂಸಾರದ ಸ್ವಂತ ಬೇಸಾ